ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಸೋಮವಾರ, ದಿನಾಂಕ : 28 ನೇ ಸೆಪ್ಟೆಂಬರ್, 2020

ಡೆಂಗ್ಯೂ ಮತ್ತು ಕರೋನಾ ಖಾಯಿಲೆಯ ಕುರಿತು

ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು):-

844 (840) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಕಳೆದ 6 ತಿಂಗಳಿನಲ್ಲಿ ಡೆಂಗ್ಯೂ ಖಾಯಿಲೆ ಸೋಂಕಿತರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಡೆಂಗ್ಯೂ ಖಾಯಿಲೆಗೆ ಪ್ಲೇಟ್‌ಲೆಟ್ ಚಿಕಿತ್ಸೆಯನ್ನು ಪಡೆದ ರೋಗಿಗಳ ಸಂಖ್ಯೆ ಎಷ್ಟು ; ಪ್ಲೇಟ್‌ಲೆಟ್ ಖರೀದಿಸಿದ ಮರು ಪಾವತಿ ಕೋರಿ ಎಷ್ಟು ಮನವಿಗಳು ಸಲ್ಲಿಕೆಯಾಗಿವೆ ; ಪ್ಲೇಟ್‌ಲೆಟ್ ಖರೀದಿಸಿದ ಮರು ಪಾವತಿಗಾಗಿ ತೆಗೆದಿರಿಸಿದ ಮೊತ್ತವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಕೊರೋನ ಸಾಂಕ್ರಾಮಿಕ ಮಾರಣಂತಿಕ ರೋಗವನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು ; ಇದುವರೆಗೆ ರಾಜ್ಯದಲ್ಲಿ ಎಷ್ಟು ಕೊರೋನ ವೈರಸ್ ಪೀಡಿತ ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ;

(ಈ) ಕೊರೋನ ಖಾಯಿಲೆಗೆ ಔಷಧಿ ಇಲ್ಲವೆಂದಾದ ಮೇಲೆ ಆಸ್ಪತ್ರೆಗಳಲ್ಲಿ ಯಾವ ಔಷಧಿಗಳನ್ನು ಕೊರೋನ ಖಾಯಿಲೆಗೆ ನೀಡಲಾಗುತ್ತಿದೆ; ಔಷಧ ಇಲ್ಲವೆಂದಾದ ಮೇಲೆ ಕೊರೋನ ಖಾಯಿಲೆಯು ಹೇಗೆ ಗುಣವಾಗುತ್ತದೆ ;

(ಉ) ಕೊರೋನ ಖಾಯಿಲೆಗೆ ಚಿಕಿತ್ಸೆ ಇಲ್ಲವೆಂದಾದ ಮೇಲೆ ಆಸ್ಪತ್ರೆಗಳಲ್ಲಿ ದಾಖಲಿಸಿ ಅನಗತ್ಯ ; ಅನಾವಶ್ಯಕ ಚಿಕಿತ್ಸೆ ನೀಡುತ್ತಿರುವ ಬಗ್ಗೆ ಸರ್ಕಾರದ ನಿಲುವೇನು ?